# ಮಾನಸ ಸರೋವರ

## ಅಲ್ಲೋಲ ಕಲ್ಲೋಲ

ಮಾನಸ ಸರೋವರಕ್ಕೆ ಕಲ್ಲು ಬಿದ್ದರೆ ಉಂಟಾಗುವ ಕಂಪನಗಳು ವ್ಯಕ್ತಿಯ ಮೇಲಷ್ಟೇ ಅಲ್ಲ, ಸಮಷ್ಟಿಯ ಮೇಲೂ ಪರಿಣಾಮ ಬೀರಬಲ್ಲವು. ಎಳೆಯರ ಮನಸ್ಸಿನ ಮೇಲೆ ಉಂಟಾಗುವ ದುಷ್ಪರಿಣಾಮಗಳು ಉಂಟು ಮಾಡುವ ಹಾನಿ ಊಹಾತೀತ. ಸ್ಪರ್ಧಾತ್ಮಕ ಶಿಕ್ಷಣದ ಹೆಸರಿನಲ್ಲಿ ಎಳೆಯರನ್ನು ರೇಸು ಕುದುರೆಗಳಂತೆ ಕಾಣುತ್ತಿದ್ದೇವೆ. ಪರೀಕ್ಷೆಗಳ ಸಾಲುಗಳ ಸಮ್ಮುಖದಲ್ಲಿ ಎಳೆಯರನ್ನು ಬಲಿಪಶುಗಳಂತೆ ಮುಖಾಮುಖಿಯಾಗಿಸಿ, ಅವರ ಬಾಲ್ಯದ ಆರ್ದ್ರತೆಯನ್ನು ಹೀರಿ ಶುಷ್ಕವಾಗಿಸುತ್ತಿದ್ದೇವೆ. ಇದರ ಪರಿಣಾಮ, ಹರೆಯದಲ್ಲೇ ಖಿನ್ನತೆ ಆವರಿಸಿಕೊಳ್ಳುತ್ತಿದೆ. ಆತ್ಮಹತ್ಯೆಗಳ ಸಂಖ್ಯೆಯೂ ಹೆಚ್ಚುತ್ತಿದೆ. ಇದೇನಾ ನಾವು ರೂಪಿಸುತ್ತಿರುವ ಹಾಗೂ ಹಂಬಲಿಸುತ್ತಿರುವ ಭಾರತ?

■ ಡಾ. ಶಿವಾನಂದ ಬಿ. ಹಿರೇಮಠ
ಹುಬ್ಬಳ್ಳಿಯಲ್ಲಿ ನೆಲೆಸಿರುವ ಲೇಖಕರು ವೃತ್ತಿಯಿಂದ ಮನೋವೈದ್ಯರು

ಅಕ್ಟೋಬರ್ 10 ‘ವಿಶ್ವ ಮಾನಸಿಕ ಆರೋಗ್ಯ ದಿನ’. ಈ ಸಂದರ್ಭದಲ್ಲಿ, ಹದಿಹರೆಯದವರ ಮಾನಸಿಕ ತಲ್ಲಣಗಳ ಬಗ್ಗೆ ‘ಸುಧಾ’ ಸಹೃದಯರ ಗಮನಸೆಳೆಯುತ್ತಿದೆ.